International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

# ಮಕಾಲೀನ ಸಮಾಜಕ್ಕೆ ಫಕೀರನ ಪ್ರಸ್ತುತತೆ

**ಡಾ. ಟಿ.ಎಲ್. ಜಗದೀಶ**

ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು, ಮೈಸೂರು ಜಿಲ್ಲೆ

**Abstract**

ಮಹಾತ್ಮ ಗಾಂಧಿಯವರಲ್ಲಿದ್ದ ಮೌಲ್ಯಗಳು, ಇಂದಿನ ಸಮಾಜದ ಹೋರಾಟಗಾರರಲ್ಲಿ ಬತ್ತಿಹೋಗಿವೆ. ವಿಶಾಲ ಭಾರತದ ಪ್ರತಿ ಮನುಷ್ಯನಿಗೆ ಬಟ್ಟೆ ದೊರೆಯುವರೆಗೆ ನಾನು ಅರೆಬಟ್ಟೆಯಲ್ಲಿರುತ್ತೇನೆ ಎಂದು ಸಂಕಲ್ಪ ಮಾಡುವವರು ಇಂದು ಯಾರಿದ್ದಾರೆ? ಇಂತಹ ಹತ್ತು ಹಲವು ಆದರ್ಶಗಳ ಖನಿಯಾಗಿದ್ದ ಮಹಾತ್ಮಗಾಂಧೀಜಿಯ ಅಗತ್ಯತೆ ಪ್ರಸ್ತುತದಲ್ಲಿಯೂ ಎದ್ದು ತೋರುತ್ತದೆ.

ಹಸಿರಾಗಿರುವ ಹೆಸರು ಗಾಂಧಿಯದು. ಕಾರಣ ಅವರಲ್ಲಿದ್ದ ಸತ್ಯ ಅಹಿಂಸೆ, ಸತ್ಯಾಗ್ರಹದಂತಹ ಆದರ್ಶಗಳು. ಇಡೀ ವಿಶ್ವದಲ್ಲಿಯೇ ಪ್ರಪ್ರಥಮ ಬಾರಿಗೆ ವರ್ಣದ್ವೇಷದ ವಿರುದ್ಧ ಹೋರಾಡಿದ ಗಾಂಧಿ ಮಹಾತ್ಮರಾದುದ್ದಕ್ಕೆ ಆಶ್ಚರ್ಯ ಪಡಬೇಕಾಗಿಲ್ಲ. ಮಾತ್ರವಲ್ಲ ಮನುಜರು ಮಹಾತ್ಮನಾಗುವುದು ಸುಲಭವೂ ಅಲ್ಲ. ಸೂರ್ಯ ಮುಳುಗದ ಸಾಮ್ರಾಜ್ಯದೊಡನೆ ಹೋರಾಡಿದ ಮಾಂತ್ರಿಕ ಇಂದಿಗೂ ಅಮರ.

ವಿಶ್ವದ ಹಲವು ದೇಶಗಳಲ್ಲಿ ಗಾಂಧಿಯು ಅಸ್ತಿತ್ವದಲ್ಲಿರುವುದು ಅವರ ಔನ್ನತ್ಯದ ಪ್ರತೀಕ. ಅಂತಹ ಮಹಾತ್ಮ ಭಾರತದಂತಹ ಪವಿತ್ರಭೂಮಿಯಲ್ಲಿ ಜನಿಸಿ ಈ ದೇಶದ ಪಾವಿತ್ರ್ಯತೆಯನ್ನು ಇಮ್ಮಡಿಗೊಳಿಸಿದ್ದಾರೆ. ಇಂತಹ ಮಹಾತ್ಮನ ಎದೆಗಾರಿಕೆಯನ್ನು ಚುಟುಕ ಬ್ರಹ್ಮ ದಿನಕರ ದೇಸಾಯಿ ಅವರು ಹೇಳಿರುವುದು ಸಂದರ್ಭೋಚಿತ.

ಮಹಾತ್ಮ ಗಾಂಧಿಯವರಲ್ಲಿದ್ದ ಮೌಲ್ಯಗಳು, ಇಂದಿನ ಸಮಾಜದ ಹೋರಾಟಗಾರರಲ್ಲಿ ಬತ್ತಿಹೋಗಿವೆ. ವಿಶಾಲ ಭಾರತದ ಪ್ರತಿ ಮನುಷ್ಯನಿಗೆ ಬಟ್ಟೆ ದೊರೆಯುವರೆಗೆ ನಾನು ಅರೆಬಟ್ಟೆಯಲ್ಲಿರುತ್ತೇನೆ ಎಂದು ಸಂಕಲ್ಪ ಮಾಡುವವರು ಇಂದು ಯಾರಿದ್ದಾರೆ? ಇಂತಹ ಹತ್ತು ಹಲವು ಆದರ್ಶಗಳ ಖನಿಯಾಗಿದ್ದ ಮಹಾತ್ಮಗಾಂಧೀಜಿಯ ಅಗತ್ಯತೆ ಪ್ರಸ್ತುತದಲ್ಲಿಯೂ ಎದ್ದು ತೋರುತ್ತದೆ.

ಹಸಿರಾಗಿರುವ ಹೆಸರು ಗಾಂಧಿಯದು. ಕಾರಣ ಅವರಲ್ಲಿದ್ದ ಸತ್ಯ ಅಹಿಂಸೆ, ಸತ್ಯಾಗ್ರಹದಂತಹ ಆದರ್ಶಗಳು. ಇಡೀ ವಿಶ್ವದಲ್ಲಿಯೇ ಪ್ರಪ್ರಥಮ ಬಾರಿಗೆ ವರ್ಣದ್ವೇಷದ ವಿರುದ್ಧ ಹೋರಾಡಿದ ಗಾಂಧಿ ಮಹಾತ್ಮರಾದುದ್ದಕ್ಕೆ ಆಶ್ಚರ್ಯ ಪಡಬೇಕಾಗಿಲ್ಲ. ಮಾತ್ರವಲ್ಲ ಮನುಜರು ಮಹಾತ್ಮನಾಗುವುದು ಸುಲಭವೂ ಅಲ್ಲ. ಸೂರ್ಯ ಮುಳುಗದ ಸಾಮ್ರಾಜ್ಯದೊಡನೆ ಹೋರಾಡಿದ ಮಾಂತ್ರಿಕ ಇಂದಿಗೂ ಅಮರ.

ವಿಶ್ವದ ಹಲವು ದೇಶಗಳಲ್ಲಿ ಗಾಂಧಿಯು ಅಸ್ತಿತ್ವದಲ್ಲಿರುವುದು ಅವರ ಔನ್ನತ್ಯದ ಪ್ರತೀಕ. ಅಂತಹ ಮಹಾತ್ಮ ಭಾರತದಂತಹ ಪವಿತ್ರಭೂಮಿಯಲ್ಲಿ ಜನಿಸಿ ಈ ದೇಶದ ಪಾವಿತ್ರ್ಯತೆಯನ್ನು ಇಮ್ಮಡಿಗೊಳಿಸಿದ್ದಾರೆ. ಇಂತಹ ಮಹಾತ್ಮನ ಎದೆಗಾರಿಕೆಯನ್ನು ಚುಟುಕ ಬ್ರಹ್ಮ ದಿನಕರ ದೇಸಾಯಿ ಅವರು ಹೇಳಿರುವುದು ಸಂದರ್ಭೋಚಿತ.

"ಬಾಪೂಜಿಯ ಊರುಗೋಲು
ಕೋಲ ಮಿಂಚಿಗೂ
ತರಿಸಬಹುದಲ್ವೆ ಸೋಲು"

ಎಂಬ ಕವಿಯ ಹೇಳಿಕೆ ಉತ್ಪ್ರೇಕ್ಷೆ ಅಲ್ಲ.

ಅಂತಹಆದರ್ಶಗಳನ್ನು ಮೈಗೂಡಿಸಿಕೊಂಡ ಮಹಾತ್ಮನ ಬದುಕೇ ವಿಸ್ಮಯ. ಇವರ ಮೊದಲ ಹೆಸರು ಮೋಹನ್‌ದಾಸ್ ಕರಮ ಚಂದ್ ಗಾಂಧಿ. ಅವರು ಕ್ರಿ.ಶ. 1869ರ ಆಕ್ಟೋಬರ್ 2 ರಂದು ಕಾಥೇವಾಡದ

ಸಂಸ್ಥಾನದಲ್ಲಿರುವ ಪೋರಬಂದರ್‌ನಲ್ಲಿ ಜನಿಸಿದರು. ತಂದೆ ಕರಮಚಂದ ಗಾಧಿ, ತಾಯಿ ಪುತಲೀಬಾಯಿ. ಇವರ ಸುಪುತ್ರನಾದ ಗಾಂಧಿಯು ಭವ್ಯಬಾರತದ ಭರವಸೆಯ ಆಶಾಕಿರಣವಾಗಿ ಬೆಳೆದರು.
ಬಾಲಕ ಮೋಹನ್‌ದಾಸ್ ಅವರ ಮನಸ್ಸಿನ ಮೇಲೆ ದಿವಾನರಾಗಿದ್ದ ತಂದೆಯ ಪ್ರಭಾವ ಅಪಾರ.

**ಗಾಂಧೀಜಿಯವರ ವಿದ್ಯಾಭ್ಯಾಸ ಪೋರ್‌ಬಂದರ್**

[2:46 pm, 20/08/2026] HUN. Jagadeesh. Kannada: ಹಾಗೂ ರಾಜಕೋಟೆಯಲ್ಲಿ ನಡೆಯಿತು. ಆ ಎಳೆ ಕಥೆಯು ತಂದೆ ತಾಯಿಯ ಬಗೆಗೆ ಅಪಾರ ಭಕ್ತಿಯನ್ನು ಮನಸ್ಸಿನ ಮೇಲೆ ಹರಿಶ್ಚಂದ್ರ ನಾಟಕ ಅಚ್ಚಳಿಯದೆ ನಿಲ್ಲುವ ಮೂಲಕ ಸತ್ಯಸಂಧನಾಗಬೇಕೆಂಬ ಆಚಲ ನಿರ್ಧಾರ ಬೇರೂರಿತು. ಮಾತ್ರವಲ್ಲ ಹರಿಶ್ಚಂದ್ರ ನಂತೆಯೇ ಆದರ್ಶ ಪುರುಷನಾಗಬೇಕೆಂಬ ಹಂಬಲ ಚಿಗುರೊಡೆಯಿತು. ಅಂತೆಯೇ ಶ್ರವಣ ಕುಮಾರನ ಅಂಕುರಿಸಿತು. ಮುಂದೆ ಜಗತ್ತಿನ ದಟ್ಟವಾದ ಸಮಸ್ಯೆಗಳನ್ನು ಎದುರಿಸಬಲ್ಲವನಾಗಿದ್ದ ಗಾಂಧೀಜಿಗೆ ಭಯವಿರಲಿಲ್ಲವೆಂದಲ್ಲ. ಬಾಲಕನಾಗಿದ್ದಾಗ ಕತ್ತಲೆಗೆ ಹೆದರುತ್ತಿದ್ದರು. ಭಯದಿಂದ ಎಚ್ಚೆತ್ತು ಕುಳಿತು ಬಿಡುತ್ತಿದ್ದರು. ದೆವ್ವ, ಪಿಶಾಚಿಯ ಭಯ ಅವರಿಗೆ ಕಾಡುತ್ತಿತ್ತು. ಆ ಸಂದರ್ಭದಲ್ಲಿ ದಾದಿಯು ಕೊಟ್ಟ ಸಲಹೆ ಧೀರನನ್ನಾಗಿಸಿತು. ರಾಮನಾಮ ಜಪಿಸು, ಭಯ ಹೊರಟು ಹೋಗುತ್ತದೆಂಬ ದಾದಿಯ ಸಲಹೆ ಗಾಂಧೀಜಿಯನ್ನು ಮಾರ್ಪಡಿಸಿತು. ಮುಂದೆ ಅದೇ ರಕ್ಷಾಮಂತ್ರವಾಯಿತು.

ಬಾಲ್ಯದ ದಿನಗಳಲ್ಲಿ ಕಳ್ಳತನ ಹಾಗೂ ಸುಳ್ಳು ಹೇಳುವ ಪರಿಪಾಠ ಎಲ್ಲಮಕ್ಕಳಂತೆ ಇದ್ದರೂ ಸತ್ಯಹರಿಶ್ಚಂದ್ರ ನಾಟಕ ಹಾಗೂ ಶ್ರವಣಕುಮಾರನ ಕಥೆ ಇವರ ಮೇಲೆ ಅಚ್ಚಳಿಯದೆ ಪ್ರಭಾವ ಬೀರಿತು. ಸತ್ಯವೆಂದರೆ ಬದುಕು, ಬದುಕೆಂದರೆ ಸತ್ಯ ಎನ್ನುವಷ್ಟರ ಮಟ್ಟಿಗೆ ಅಚಲವಾ ಯಿತು. ಶಾಲೆಯಲ್ಲಿ ಶ್ರದ್ಧಾವಂತ ವಿದ್ಯಾರ್ಥಿಯಾಗಿದ್ದ ಗಾಂಧೀಜಿಗೆ ಪರೀಕ್ಷೆಯೊಂದು ಎದುರಾಗುತ್ತದೆ. ಶಾಲೆಗೆ ತನಿಖಾಧಿಕಾರಿಯೊಬ್ಬರು ಆಗಮಿಸಿದರು. ಉಪಾಧ್ಯಾ ಯರು ಇಂಗ್ಲಿಷ್ ಪದವೊಂದನ್ನು ವಿದ್ಯಾರ್ಥಿಗಳಿಗೆ ಬರೆಯಲು ಹೇಳಿದರು. ಇದನ್ನರಿತ ಉಪಾಧ್ಯಾಯರು ಪಕ್ಕದ ವಿದ್ಯಾರ್ಥಿಯನ್ನು ನೋಡಿ ಸರಿಯಾಗಿ ಬರಿ ಎಂದು ಸನ್ನೆ ಮಾಡಿದರು. ಆದರೆ ಮೋಹನನಿಗೆ ಕಾಪಿ ಮಾಡುವುದು ತಪ್ಪೆನಿಸಿತು. ಇದರಿಂದ ಶಿಕ್ಷಕರಿಗೆ ಮುಜುಗರವಾಯಿತು. ನಂತರ ಇವರನ್ನು ಶಪಿಸಿದರು. ಆದರೂ ಗಾಂಧೀಜಿ ವಿಚಲಿತರಾಗಲಿಲ್ಲ.

ಗಾಂಧೀಜಿಗೆ ಹದಿಮೂರು ವರ್ಷವಿದ್ದಾಗಲೇ ಮದುವೆಯಾಗಿ ಜವಾಬ್ದಾರಿ ಹೆಚ್ಚಾಯಿತು. ಅವರ ಹದಿನೆಂಟನೆಯ ವಯಸ್ಸಿನಲ್ಲಿ ತಂದೆಯ ಮರಣನ್ನು ಇವರ ಹೊಣೆಗಾರಿಕೆಯನ್ನು ಹೆಚ್ಚಿಸಿತು. ಹಿತೈಷಿಯೊಬ್ಬರ ಸಲಹೆಯಂತೆ ವಕೀಲಿ ಪರೀಕ್ಷೆಗೆಂದು ತಾಯಿಯ ಪರತ್ತಿ ಮೇರೆಗೆ ಹೊರಡಲು ಅನುವಾದರು. ಮೂರು ವರ್ಷಗಳ ವಿದ್ಯಾಭ್ಯಾಸದಲ್ಲಿ ನಿರತರಾದರು. ಈ ಮೂರುವರ್ಷದ ಕಾಲ ಹೆಂಡತಿ ಮಗುವನ್ನು ಅಣ್ಣನಾಶ್ರಯದಲ್ಲಿಟ್ಟು ಅವಧಿಯಲ್ಲಿ ಅಪಾರವಾದ ಜ್ಞಾನವನ್ನು ಗಳಿಸಿಕೊಂಡರು. ಸರಳಜೀವನ, ಮಿತವ್ಯಯದ ಜೊತೆಗೆ ಇಂಗ್ಲೆಂಡ್‌ನಲ್ಲಿ ಚರ್ಚಿತವಾಗುತ್ತಿದ್ದ ಉದಾತ್ತ ವಿಚಾರಗಳು ಹಾಗೂ ಸಂಘಟನೆಗಳ ಬಗೆಗೆ ಚಿಂತಿಸುತ್ತಿದ್ದರು. ಅದಕ್ಕೆ ಪೂರಕವಾದ ಕಾನೂನು ಗ್ರಂಥಗಳನ್ನು ಅಭ್ಯಾಸ ಮಾಡಿದರು. ಇವರಿಗೆ ಆ ವೇಳೆಗೆ ಥಿಯಸಾಫಿಕಲ್ ಸೊಸೈಟಿಯ ನಾಯಕರೆನಿಸಿದ್ದ ಮೇಡಂ ಬ್ಲಾವಟ ಮತ್ತು ಡಾ. ಆನಿಬೆಸೆಂಟರ ಪರಿಚಯ ಅವರನ್ನು ಮತ್ತಷ್ಟು ಪ್ರಭಾವಿಸಿತು. ಈ ಸಂಸ್ಥೆಯ ನೆರವಿನಿಂದ ಬುದ್ಧ, ಯೇಸುವಿನ ಜೀವನ ಚರಿತ್ರೆ, ಭಗವದ್ಗೀತೆಯಲ್ಲಿನ ಮೌಲ್ಯಗಳನ್ನು, ಆದರ್ಶಗಳನ್ನು ಮೈಗೂಡಿಸಿಕೊಂಡರು. ಇವರು ಮೂರು ವರ್ಷದ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಭಾರತಕ್ಕೆ ಬಂದರು.

ವಿದ್ಯಾಭ್ಯಾಸ ಮುಗಿಸಿ ತಾಯ್ನಾಡಿಗೆ ಹಿಂದುರು ಗಿದರು. ಮೂಲತಃ ವೈಶ್ಯಜಾತಿಯ ಮೋದ್‌ಬನಿಯಾ ಪಂಗಡಕ್ಕೆ ಸೇರಿದವರಾಗಿದ್ದ ಗಾಂಧೀಜಿಗೆ ಸಂಪ್ರದಾಯದ ನೆಪವೊಡ್ಡಿ ಅವರನ್ನು ಬಹಿಷ್ಕರಿಸಿದರು. ಇದರಿಂದ ವಿಚಲಿತರಾಗದ ಗಾಂಧಿ ಅಂದಿನಿಂದಲೇ ಜಾತಿ, ವರ್ಣ, ಪಂಗಡಗಳ ಕಟ್ಟನ್ನು ಮೀರಿನಿಲ್ಲುವ

ಮನೋಭಾವವನ್ನು ತಳೆದರು. ಮಾತ್ರವಲ್ಲ ವಕೀಲಿ ವೃತ್ತಿಯನ್ನು ಆರಂಭಿಸಿ ಬೊಂಬಾಯಿ ಮತ್ತು ರಾಜಕೋಟೆಯಲ್ಲಿ ಕೆಲಸ ಮಾಡಿದರು. ಆದರೆ ನಿರೀಕ್ಷಿಸಿದ ಯಶಸ್ಸು ಲಭಿಸಲಿಲ್ಲ. ಪರಿಣಾಮವಾಗಿ
[2:46 pm, 20/08/2026] HUN. Jagadeesh. Kannada: ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ದೌರ್ಜನ್ಯವನ್ನು ನೋಡಿ ಆಫ್ರಿಕಾದಲ್ಲಿ ಇವರಿಗೆ ಕೊಡುತ್ತಿದ್ದ ಬಿಳಿಯರ ಕಿರುಕುಳವನ್ನು ಕಂಡು ಮರುಗಿದರು. ಮಾತ್ರವಲ್ಲ ಅವರಿಗೆ ನ್ಯಾಯದೊರಕಿಸಿ ಕೊಡಬೇಕೆಂದು ಆಹರ್ನಿಶಿ ದುಡಿದರು.

1860ರ ಕಾನೂನ್ನಿಯ ಭಾರತ ದೇಶದಿಂದ ವಲಸೆ ಹೋಗಿ ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದ್ದ ಭಾರತೀಯ ವರ್ತಕರೂ, ಕೂಲಿ ಯಾಳುಗಳು ಅಲ್ಲಿ ಶೋಷಣೆಗೆ ಮುಕ್ತಗೊಳಿಸಬೇಕೆಂಬ ಉದ್ದೇಶದಿಂದ ಹೋರಾಟದ ತುತ್ತಾಗಿದ್ದರು. ಅವರನ್ನು ಶೋಷಣೆಯಿಂದ ಹಾದಿಯನ್ನು ಹಿಡಿದರು. ಆ ದೇಶದ ನೆಟಾಲ್ ಮತ್ತು ಟ್ರಾನ್ಸ್‌ವಾಲ್ ಮತ್ತು ಕೇಪ್ ಪ್ರಾಂತ್ಯಗಳಲ್ಲಿ ಹರಡಿಕೊಂಡಿದ್ದ ಭಾರತೀಯ ವರ್ತಕರು ಹಾಗೂ ಕೂಲಿಕಾರರನ್ನು ಕರಿಯರೆಂದು ಒಂದಲ್ಲ ಒಂದು ರೀತಿಯಲ್ಲಿ ಹಿಂಸಿಸುತ್ತಿದ್ದರು. ಸ್ವತಃ ರೈಲಿನ ಮೇಲ್ದರ್ಜೆಯಲ್ಲಿ ಪ್ರಯಾಣಿಸುವಾಗ ಗಾಂಧೀಜಿಯವರ ಅನುಭವಕ್ಕೂ ಬಂದಿತು. ಅಪಮಾನಿತರಾದ ಗಾಂಧೀಜಿಯು ಸಂಪೂರ್ಣವಾಗಿ ವರ್ಣದೋಷ ನೀತಿಯನ್ನ ತೊಲಗಿಸಲು ನಿರ್ಧರಿಸಿದರು. ಪ್ರಿಟೋರಿಯಾ ಪ್ರದೇಶದಲ್ಲಿ ಭಾರತೀಯರನ್ನು ಸಂಘಟಿಸಿ ಹೋರಾಟಕ್ಕೆ ಅಣಿಗೊಳಿಸಿದರು. ಅಲ್ಲಿನ ಭಾರತೀಯರ ಸ್ಥಿತಿಗತಿಯನ್ನು ಕಂಡು ಸುಮಾರು ಇಪ್ಪತ್ತು ವರ್ಷಗಳ ಕಾಲ ಅಲ್ಲಿಯೇ ಉಳಿಯಬೇಕಾಯಿತು. ಆ ದಿನಗಳಲ್ಲಿ ವರ್ಣದ್ವೇಷದ ದುಳ್ಳೂರಿಯಲ್ಲಿ ತತ್ತರಿಸುತ್ತಿದ್ದ ಭಾರತೀಯ ಹಿಂದೂ, ಮುಸ್ಲಿಂ, ಪಾರ್ಸಿ, ಕ್ರಿಶ್ಚಿಯನ್ ಎಲ್ಲ ಧರ್ಮಗಳಿಗೆ ಸೇರಿದ್ದ ಭಾರತೀಯನ್ನು ಒಗ್ಗೂಡಿಸಿದರು. ಸರ್ಕಾರದ ದಬ್ಬಾಳಿಕೆಯ ವಿರುದ್ಧ ನಿಶಸ್ತ್ರ ಪ್ರತಿಭಟನೆಯ ಮಾರ್ಗವನ್ನು ತೋರಿಸಿಕೊಟ್ಟರು. ಅಲ್ಲಿಂದಲೇ 'ಸತ್ಯಾಗ್ರಹ' ಎನ್ನುವ ವಿನೂತನ ಹೋರಾಟ ಆರಂಭವಾಯಿತು. ಇದು ಜಗತ್ತಿಗೆ ಕೊಟ್ಟ ದಿವ್ಯ ಕೊಡುಗೆಯಾಯಿತು.

ಇದು ಆಫ್ರಿಕಾದಲ್ಲಿ ಅಂಕುರಿಸಿ ಭಾರತದಲ್ಲಿ ವಿಜೃಂಭಿಸಿತು. ಸರ್ವಧರ್ಮ ಸಮನ್ವಯ ಈ ಎಲ್ಲ ಮೌಲ್ಯಗಳ ಸಾಕಾರಬಿಂದುವಾದರು. 1905 ರಲ್ಲಿ ಸಬರಮತಿ ಆಶ್ರಮದ ಸೇವಕರಾದರು. ಆ ನಿಟ್ಟಿನಲ್ಲಿ ಅಸ್ಪೃಶ್ಯ ಕುಟುಂಬ ವೊಂದನ್ನು ತಮ್ಮ ಆಶ್ರಮಕ್ಕೆ ಸೇರಿಸಿಕೊಳ್ಳುವ ಮೂಲಕ ಆಶ್ರಮವನ್ನು ಸ್ಥಾಪಿಸಿ ಸರ್ವ, ಜಾತಿ, ಧರ್ಮಜನಾಂಗದ ಆ ಕುಟುಂಬದ ಲಕ್ಷ್ಮೀ ಎನ್ನುವ ಹೆಣ್ಣು ಮಗಳನ್ನು ತನ್ನ ಗೋಖಲೆಯವರಂತಹ ಸಲಹೆಯ ಮೇರೆಗೆ ಇಡೀ ಮಗಳೆಂದು ಸ್ವೀಕರಿಸಿದರು. ಗೋಪಾಲಕೃಷ್ಣ ದೇಶದಾದ್ಯಂತ ಸಂಚರಿಸಿದರು. ಈ ನಿಟ್ಟಿನಲ್ಲಿ ಬಿಹಾರದ ಚಂಪಾರಾಣ್ಯ ಪ್ರದೇಶದ ನೀಲಿ ಬೆಳೆಯುವ ರೈತರ ಚಿಂತಾಜನಕವಾದ ಪರಿಸ್ಥಿತಿಯು ಗಾಂಧೀಜಿಯವರ ಮನಕಲಕಿತು. ಈ ರೈತರಲ್ಲಿ ಅರಿವು ಮೂಡಿಸುವದರ ಜೊತೆಗೆ ಚಂಪಾರಣ್ಯ ಸತ್ಯಗ್ರಹವನ್ನು ಆರಂಭಿಸಿದರು. ಇವರ ಈ ಹೋರಾಟದಿಂದ ಸಂಘಟಿತರಾದ ರೈತ ಸಮೂಹಕ್ಕೆ ಡಾ. ರಾಜೇಂದ್ರಪ್ರಸಾದ್ ಮತ್ತು ಕೃಪಲಾನಿ ಸಹಭಾಗಿಗಳಾದರು. ಈ ಸತ್ಯಾಗ್ರಹದ ಯಶಸ್ಸಿನ ನಂತರ ಮುಂದೆ ಗುಜರಾತಿನ ಬೆಡ್ಡಾ, ಆಹಮದಬಾದಿನ ಬಟ್ಟೆಗಿರಣಿ ಕಾರ್ಮಿಕರ ಮುಷ್ಕರದ ಜೊತೆ ಗಾಂಧಿ ಉಪವಾಸ, ಅಸಹಕಾರ ಚಳವಳಿ, ರೌಲತ್ ಕಾಯಿದೆ ವಿರುದ್ಧ ಪ್ರತಿಭಟನೆ. ಈ ರೀತಿಯ ಚಳವಳಿಗಳಿಂದ ರೈತರು, ಸಾಮಾನ್ಯಜನರು, ನೌಕರರು, ವ್ಯಾಪಾರಸ್ಥರು, ವಿದ್ಯಾರ್ಥಿಗಳು ಎಲ್ಲಾ ವರ್ಗದ ಜನರು ಹೋರಾಟದಲ್ಲಿ ಧುಮುಕಿದರು. ಅದರ ಪರಿಣಾಮ ಭಾರತೀಯರಿಗೆ ಬ್ರಿಟಿಷರು ಸ್ವಾತಂತ್ರವನ್ನು ಕೊಟ್ಟರು.

ಸತ್ಯವನ್ನು ದೇವರೆಂದು ಭಾವಿಸಿದ್ದ ಗಾಂಧೀಜಿಯ ಅಹಿಂಸೆಯನ್ನು ವ್ರತವನ್ನಾಗಿ ಸ್ವೀಕರಿಸಿ ಅನುಸರಿಸು ತ್ತಿದ್ದರು. ಆದರೆ ಪ್ರಸ್ತುತ ಕಾಲಘಟ್ಟದಲ್ಲಿ ನಡೆಯುತ್ತಿರುವ ಚಳವಳಿಗಳು ಮೌಲ್ಯವನ್ನು ಕಳೆದುಕೊಳ್ಳುತ್ತಿವೆಯೇನೋ ಎನ್ನುವ ಆತಂಕವಿದೆ. ಇಂತಹ ಚಳವಳಿಯ ನೇತೃತ್ವ ವಹಿಸಿಕೊಳ್ಳುವ ಗಾಂಧೀಜಿಯಂತಹ ನಾಯಕರ ಕೊರತೆ

**ಗಾಂಧೀಜಿಯ ಹೋರಾಟದ ಪ್ರಭೆ ದಕ್ಷಿಣ**

[2:46 pm, 20/08/2026] HUN. Jagadeesh. Kannada: ಇಂದು ನಡೆಯುತ್ತಿರುವ ಹಿಂಸಾಚಾರಕ್ಕೆ ನೇರ ಕಾರಣವೆನ್ನಬಹುದು. ಗುರಿಯಿಲ್ಲದ ಹೋರಾಟಗಳು, ಸಮಾಜ ಘಾತುಕರ ಜೊತೆ ಸಂಪರ್ಕ ಈ ಎಲ್ಲಾ ಕಾರಣಗಳಿಂದ ಇಂದಿನ ಚಳವಳಿಗಳು, ಹೋರಾಟಗಳು, ನಿರಶನಗಳು, ಉಪವಾಸ, ಸತ್ಯಾಗ್ರಹಗಳು ಸತ್ವಹೀನವಾಗುತ್ತಿವೆ. ಯಾವುದೋ ಆಮಿಷಕ್ಕೆ ಒಳಗಾಗಿ ಹೋರಾಟಗಾರರಿಂದ ಏನನ್ನು ನಿರೀಕ್ಷಿಸಲಾಗದು. ಚಳವಳಿಗಳಲ್ಲಿ ಭಾಗಿಯಾಗುವ ಇಂತಹ ಮಿಗಿಲಾಗಿ ಸಮಾಜದ ಸ್ವಾಸ್ಥ್ಯ ಹದಗೆಡುತ್ತಿದೆ. ಇದರಿಂದ ಕಾನೂನು ಸುವ್ಯವಸ್ಥೆ ಹಾಳಾಗುತ್ತದೆ.

ಮಹಾತ್ಮಗಾಂಧಿಯವರಲ್ಲಿದ್ದ ಮೌಲ್ಯಗಳು, ಇಂದಿನ ಸಮಾಜದ ಹೋರಾಟಗಾರರಲ್ಲಿ ಬತ್ತಿಹೋಗಿವೆ. ವಿಶಾಲ ಭಾರತದ ಪ್ರತಿ ಮನುಷ್ಯನಿಗೆ ಬಟ್ಟೆ ದೊರೆಯುವರೆಗೆ ನಾನು ಅರೆಬಟ್ಟೆಯಲ್ಲಿರುತ್ತೇನೆ ಎಂದು ಸಂಕಲ್ಪ ಮಾಡುವವರು ಇಂದು ಯಾರಿದ್ದಾರೆ? ಇಂತಹ

ಹತ್ತು ಹಲವು ಆದರ್ಶಗಳ ಖನಿಯಾಗಿದ್ದ ಮಹಾತ್ಮ ಗಾಂಧೀಜಿಯ ಅಗತ್ಯತೆ ಪ್ರಸ್ತುತದಲ್ಲಿಯೂ ಎದ್ದು ತೋರುತ್ತದೆ. ಈ ಹಿನ್ನಲೆಯಲ್ಲಿ ತನ್ನ ಬಡದೇಹ ದಿಂದಲೇಬೃಹತ್ ಸಾಮ್ರಾಜ್ಯಶಾಹಿಯನ್ನು ಎದುರಿಸುವ ಎದೆಗಾರಿಕೆ ಹಾಗೂ ಜನಬೆಂಬಲ ಅವರಿಗಿತ್ತು. ಅಂತಹ ಮಹಾನ್ ನಾಯಕನ ಅಗತ್ಯತೆ ಪ್ರಸ್ತುತತೆ ನಮ್ಮ ಘರ್ಷಣೆಗಳು, ರಾಜ್ಯ-ರಾಜ್ಯಗಳ ನಡುವೆ ನಡೆಯುತ್ತಿ ಜಗತ್ತಿಗಿದೆ. ರಾಷ್ಟ್ರ ರಾಷ್ಟ್ರಗಳ ನಡುವೆ ನಡೆಯುವ ರುವ ಅಂತರಿಕ ಕಲಹಗಳನ್ನು ಹಿಮ್ಮೆಟ್ಟಿಸಲು ಇಂತಹ ಫಕೀರನು ಮತ್ತೆ ಮತ್ತೆ ಹುಟ್ಟಿಬರಬೇಕೆನಿಸುತ್ತದೆ.

**ಆಕರ ಗ್ರಂಥಗಳು :**

1. ಗಾಂಧೀ ಚಿಂತನ. ಪ್ರೊ. ಟಿ.ಆರ್ ಪ್ರಾಣೇಶ್‌ರಾವ್
2. ನನ್ನ ಸತ್ಯಾನ್ವೇಷಣೆ. - ಗೊರೂರು ರಾಮಸ್ವಾಮಿ ಅಯ್ಯಂಗಾರ್